ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ, ಜನ ಸಾಯುತ್ತಿದ್ದಾರೆ, ಅಂಥ ಬರಗಾಲ. ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ರೈತನ ಬಗ್ಗೆ ಬಜೆಟ್ ಭಾಷಣದಲ್ಲಿ ಒಂದು ಶಬ್ದ ಇಲ್ಲ.

(ಗೊಂದಲ)

ಸಾಲ ಮನ್ನಾ ಬಗ್ಗೆ ಒಂದು ಮಾತು ಆಡಿಲ್ಲ, ಬರಗಾಲ ಪ್ರದೇಶಗಳಿಗೆ ಒಬ್ಬ ಮಂತ್ರಿಯೂ ಕೂಡ ಹೋಗಿಲ್ಲ, ಕುಡಿಯುವ ನೀರಿಲ್ಲ, ಹೇಳುವವರು ಕೇಳುವವರು ಯಾರೂ ಇಲ್ಲ, ಇದು ಜವಾಬ್ದಾರಿ ಸರ್ಕಾರವೇ? ಇದನ್ನು ಪ್ರತಿಭಟಿಸಿ ನಾನು (ಧರಣಿ ಕೂರುವೆನು ಧರಣಿ ಮಾಡಲು ವೆಲ್‌ನ್ನು ಪ್ರವೇಶಿಸಿ ಕುಳಿತುಕೊಂಡರು)

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ : ಸದನಕ್ಕೆ ಅಗೌರವ ಮಾಡುವಂತಹ ಕೆಲಸವನ್ನು ಯಡಿಯೂರಪ್ಪರವರು ಮಾಡುತ್ತಿದ್ದಾರೆ.

(ಗೊಂದಲ)

ಛೇರ್ಮನ್ : ಅವರು ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ: ಸಾರ್ವಜನಿಕ ಭಾಷಣಕ್ಕೆ ಜನ ಬಂದಿರಲಿಲ್ಲ ಎಂದು ಕಾಣುತ್ತದೆ, ಅದಕ್ಕೆ ಇಲ್ಲಿ ಬಂದು ಕೋಪ ತೋರಿಸುತ್ತಿದ್ದಾರೆ ಅವರು ಧರಣಿ ಕುಳಿತು ಮಾತನಾಡಲು ಅವಕಾಶ ಕೊಡುವುದಾದರೆ ಧರಣಿ ಪ್ರವೇಶಿಸಿ ಮಾತನಾಡಲು ನನಗೂ ಅವಕಾಶ ಕೊಡಿ. (ಧರಣಿ ಮಾಡಿ ಕೂರಲು ವೆಲ್‌ನ್ನು ಪ್ರವೇಶಿಸಿದರು)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ನನ್ನ ಕ್ರಿಯಾಲೋಪ ಇದೆ. ಸಭೆಯಲ್ಲಿ ಕೋರಂ ಇಲ್ಲ, ಸಭೆಯನ್ನು ಮುಂದಕ್ಕೆ ಹಾಕಿ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಯಡಿಯೂರಪ್ಪರವರು ಮತ್ತು ಎಲ್.ಆರ್. ಶಿವರಾಮೇಗೌಡರು ಬಾವಿಯಲ್ಲಿ ನಿಂತಿದ್ದರು. ಸದನದಲ್ಲಿ ಗೊಂದಲಮಯ ವಾತಾವರಣ)

ಶ್ರೀ ವಾಟಾಳ್ ನಾಗರಾಜ್ : ಕೋರಂ ಇಲ್ಲ, ಕೋರಂ ಇಲ್ಲ ಸದನವನ್ನು ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಎಂ.ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) : ರಾಜಕೀಯ ಭಾಷಣ ಮಾಡಲಿಕ್ಕೆ ಬೇರೆ ವೇದಿಕೆ ಇದೆ. ಯಡಿಯೂರಪ್ಪನವರು ಹಿರಿಯ ಸದಸ್ಯರು ಇದ್ದಾರೆ.

(ಗೊಂದಲ)

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಗೊಂದಲ)

SRI M. VEERAPPA MOILY : Here is a member who does not believe in Parliamentary Democracy.

(INTERRUPTIONS)

SRI M. VEERAPPA MOILY : This is an insult to Democracy. This is an insult to the House. This is not the way that the an hon. member behave in this House. He was not present for the last three days in the House. Now